

ವಯಸ್ಸಿನ ಹಂಗೇ ಇಲ್ಲದಂತೆ ಆಡುತ್ತಿರುವ 37ರ ವಯಸ್ಸಿನ ಈ ಟೆನ್ನಿಸ್ ಮಾಂತ್ರಿಕ, 'ಎಲ್ಲಿಯವರೆಗೆ ಮನಸ್ಸು ನನ್ನ ದೇಹದ ಬಾಧೆ ಸಹಿಸಿಕೊಳ್ಳಬಲ್ಲದೋ ಅಲ್ಲಿಯವರೆಗೂ ಆಡುವೆ' ಎನ್ನುತ್ತಾರೆ.

■ ವಿಶಾಖ ಎನ್.

ನೋಡು. ಅಬ್ಬಬ್ಬಾ ಅಂದರೆ ಕಾಫಿ ಲೋಟ ಹಿಡಿದುಕೊಳ್ಳಬಹುದಷ್ಟೆ. ಟೆನಿಸ್ ಅಡಿ ಗೆಲ್ಲುವಷ್ಟು ತಾಕತ್ತು ಅವುಗಳಿಗಿಲ್ಲ'. ತಣ್ಣಗಿನ ಫೆಡರರ್ ಒಳಗೆ ಕಿಚ್ಚು ಹಚ್ಚಿದ್ದೇ ಆ ಚುಚ್ಚು ಮಾತು. ನಡುರಾತ್ರಿ ಉದ್ಯಾನದ ದೀಪಗಳನ್ನು ಹೊತ್ತಿಸಿ, ಟೆನಿಸ್ ಚೆಂಡನ್ನು ಗೋಡೆಗೆ ಹೊಡೆಯುತ್ತಾ ಅಭ್ಯಾಸ ಮಾಡತೊಡಗಿದರು. ಫೋರ್ ಹ್ಯಾಂಡ್, ಬ್ಯಾಕ್ ಹ್ಯಾಂಡ್ ಹೊಡೆತಗಳು ಪಕ್ಕಾ ಎನಿಸುವವರೆಗೆ ನಿದ್ರಿಸಲಿಲ್ಲ. ಆಮೇಲೆ ಅಭ್ಯಾಸಕ್ಕಿಳಿದಾಗ, ಹೀಗಳೆದಿದ್ದ ತರಬೇತುದಾರರಿಗೆ ಮಾತೇ ಹೊರಡಲಿಲ್ಲ. ಸುಮ್ಮನೆ ಆಟ ನೋಡುತ್ತಾ ನಿಂತರು.

2016ರಲ್ಲೂ ಫೆಡರರ್ ಆಸ್ಟ್ರೇಲಿಯಾ ಓಪನ್ ಗೆದ್ದಿದ್ದರು. ಆದರೆ, ಹೋದವರ್ಷ ಗೆದ್ದಾಗ ಅವರ ಕಣ್ಣಲ್ಲಿ ನೀರು ಜಿನುಗಿತು.

'ಬರ್ಡಿಚ್ ಎದುರು ಸೋತ ನೆನಪು ನನ್ನನ್ನು ಕಾಡಿತ್ತು. ಘಟಾನುಘಟಿಗಳೆಲ್ಲ ಗಾಯಗೊಂಡು, ಆಡಲಾಗದೆ ಮರಳಿದ ದೃಶ್ಯಗಳೂ ನೆನಪಾದವು. ಹಿಂದಿನ ರಾತ್ರಿ ಮೂರು ಗಂಟೆಯವರೆಗೆ ನಿದ್ದೆ ಬಂದಿರಲಿಲ್ಲ. ಗೆದ್ದರೆ ಹೇಗೆ, ಸೋತರೆ ಏನು ಎಂದೆಲ್ಲ ತಲೆಯೊಳಗೆ ಓಡುತ್ತಿತ್ತು. ಜನರ ಕೂಗಿನ ನಡುವೆ ಸ್ಕೋರ್ ಬೋರ್ಡ್ ನೋಡಿದೆ. ಮೊದಲೇ ಸಂಭ್ರಮಿಸಿಬಿಟ್ಟಿದ್ದೆನಾ ಎಂಬ ಅನುಮಾನ ಬಂತು. ನನ್ನ ಕೈಲಿ ಇದ್ದುದು ನಾರ್ಮನ್ ಬ್ರೂಕ್ಸ್ ಟ್ರೋಫಿ. ನಾನು ಅದನ್ನು ಟ್ರೋಫಿ ಎನ್ನಲಾರೆ – ನನ್ನ ಜತೆ ನಾರ್ಮನ್ ಇದ್ದಾನೆ ಎಂದೇ ಹೇಳುವುದು. ಸ್ಟೆಫಾನ್ ಎಡ್ಬರ್ಗ್ ಆರಾಧಕ ನಾನು. ಅವರ ಹೆಸರಿನ ಬ್ಯಾನರ್ ಅಡಿ ಹಾದುಹೋಗುವಾಗ ಆಗುವ ಖುಷಿ ಅಷ್ಟಿಷ್ಟಲ್ಲ. ಇವೆಲ್ಲದರ ಮೊತ್ತವಾಗಿ ದಪ್ಪ ಹನಿಗಳು ಕಣ್ಣಿನಿಂದ ಹರಿದವು'.

ಫೆಡರರ್ ಅತ್ತಿದ್ದು ಇದೇ ಮೊದಲೇನಲ್ಲ. ಆದರೆ, ಇಷ್ಟು ದಪ್ಪ ಹನಿಗಳು ಕ್ಯಾಮೆರಾ ಕಣ್ಣಿಗೆ ಬಿದ್ದದ್ದು ವಿರಳ. ತನ್ನನ್ನು ಅತಿಭಾವುಕ ಎಂದು ಕರೆದುಕೊಳ್ಳುವ ಅವರಿಗೆ ಬೆವರು, ಕಣ್ಣೀರು ಎರಡರ ಬೆಲೆಯೂ ಚೆನ್ನಾಗಿ ತಿಳಿದಿದೆ. 2007ರವರೆಗೆ ಸತತ 207 ವಾರ ಅವರು ನಂಬರ್ ಒನ್ ಆಗಿದ್ದರು. ಆಮೇಲೆ ಅದನ್ನು ಕಸಿದುಕೊಂಡಿದ್ದು ರಫಾ ಉರುಫ್ ನಡಾಲ್.

### ನಿವೃತ್ತಿ ಯಾವಾಗ-

ಈ ಪ್ರಶ್ನೆ ಫೆಡರರ್ ಅವರಿಗೆ ಪದೇ ಪದೇ ಎದುರಾಗುತ್ತಿದೆ. 'ಎಲ್ಲಿಯವರೆಗೆ ನನ್ನ ದೇಹ ಆಡಬಲ್ಲದೋ ಅಲ್ಲಿಯವರೆಗೆ ಆಡುವೆ. ಮಡದಿ––ಮಕ್ಕಳು–– ಅಪ್ಪ–ಅಮ್ಮ ಎಲ್ಲಿಯವರೆಗೆ ನಾನು ಕೊಡುತ್ತಿರುವ ಕೋಟಲೆ ತಡೆದುಕೊಳ್ಳಬಲ್ಲರೋ ಅಲ್ಲಿಯವರೆಗೆ ಆಡುವೆ. ಎಲ್ಲಿಯವರೆಗೆ ಮನಸ್ಸು ನನ್ನ ದೇಹದ ಬಾಧೆ ಸಹಿಸಿಕೊಳ್ಳಬಲ್ಲದೋ ಅಲ್ಲಿಯವರೆಗೆ ಆಡುವೆ' ಎಂದು ಫೆಡರರ್ ಹೇಳಿದ ಮಾತನ್ನು ಓದಿಕೊಂಡವರೂ ಚಪ್ಪಾಳೆ ಹೊಡೆದಿದ್ದರು.

'2004ರಲ್ಲೇ ಈ ಆಟದ ಸಹವಾಸ ಸಾಕು ಎಂದು ಸುಮ್ಮನಾಗುವವನಿದ್ದೆ. ಆಮೇಲೆ ಜ್ಞಾನೋದಯವಾಯಿತು. ಆಟ, ನಾನು ಎರಡೂ ಒಂದನ್ನೊಂದು ಬಿಟ್ಟು ಸದ್ಯಕ್ಕೆ ಇರಲಾರೆವು' – ಈ ಮಾತಿಗೂ ಕರತಾಡನ ಬಿದ್ದಿತ್ತಲ್ಲವೇ?

ಮೊನ್ನೆ, ಅಕ್ಟೋಬರ್ 28ರ ಭಾನುವಾರ ತಮ್ಮದೇ ದೇಶದ (ಸ್ವಿಟ್ಜರ್ಲೆಂಡ್) ಒಳಾಂಗಣ ಕ್ರೀಡಾಂಗಣದಲ್ಲಿ ಇನ್ನೊಂದು ಪ್ರಶಸ್ತಿ ಎತ್ತಿಹಿಡಿದಾಗ ಅವರ ಮೇಲೆ ಕ್ಯಾಮೆರಾ ಬೆಳಕು ಬಿತ್ತು. ಅದು ತೊಂಬತ್ತೊಂಬತ್ತನೇ ಪ್ರಶಸ್ತಿ. ಆಗಸ್ಟ್ 8ಕ್ಕೆ 37 ತುಂಬಿದ ಅವರನ್ನು ಕ್ರೀಡಾ ಪ್ರೇಮಿಗಳು 'ತುಂಬಿದ ಕೊಡ' ಎನ್ನಲು ಇಂಥ ಅಸಂಖ್ಯ ಕಾರಣಗಳು ಸಿಗುತ್ತಾ ಹೋಗುತ್ತವೆ.